ಚರ್ಚೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಜೊತೆಗೆ ಕಳ್ಳಂಬೆಳ್ಳ ಕೆರೆ ಒಡೆದಿದ್ದು ಇದುವರೆಗೂ ಅಲ್ಲಿನ ರೈತರಿಗೆ ಪರಿಹಾರವನ್ನು ಸರ್ಕಾರ ಕೊಟ್ಟಿಲ್ಲ ಅದನ್ನು ಸಹ ಕಳುಹಿಸಿದ್ದೇನೆ. ಜೊತೆಗೆ ಚುಕ್ಕೆ ಗುರ್ತಿನ ಪ್ರಶ್ನೆಯನ್ನು ಕಳುಹಿಸಿ ಒಂದೆರಡು ವರ್ಷಗಳಾದರೂ ಇಲ್ಲಿಯವರೆಗೆ ಬಂದಿಲ್ಲ ಅಂದರೆ ಇದು ಸರ್ಕಾರದ ವೈಫಲ್ಯವನ್ನು ಎತ್ತಿ ತೋರಿಸುತ್ತವೆ. ಇದರಲ್ಲಿ ಸರ್ಕಾರಕ್ಕೆ ಉತ್ತರವನ್ನು ತರಿಸುವುದಕ್ಕೆ ಕಷ್ಟವೇನಿದೆ ಎಂಬುದೂ ಗೊತ್ತಾಗುವುದಿಲ್ಲ, ಆದುದರಿಂದ ಇದರ ಬಗ್ಗೆ ಕೂಡ ಸೂಕ್ತವಾದ ಆದೇಶವನ್ನು ಸರ್ಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಚ್. ಗಂಗಾಧರನ್.—ಅಧ್ಯಕ್ಷರೇ, ಮೈಸೂರು ಮತ್ತು ಕರ್ನಾಟಕ ಈ ಎರಡೂ ಯೂನಿವರ್ಸಿಟಿಯ ಅಧ್ಯಾಪಕರುಗಳು ಎಗ್ಜಾಮಿನರ್‌ಗಳಾಗಿ ಕೆಲಸ ಮಾಡುವುದಿಲ್ಲವೆಂದು ಮುಷ್ಕರ ಹೂಡಿರುವ ಕಾರಣ ಪರೀಕ್ಷೆಗಳು ಪೋಸ್ಟ್ ಪೋನ್ ಆಗಿದೆ ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದೆ. ಇದರ ಬಗ್ಗೆ ಏನಾದರೂ ತೀವ್ರವಾಗಿ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆ

ವಿಷಯ :—ಬೆಂಗಳೂರು ನಗರದ ಚೆನ್ನಮನ ಕೆರೆ ಹಾಗೂ ಬನಶಂಕರಿ ಪ್ರದೇಶಗಳಲಿ ಕೊಳಚೆ ಪ್ರದೇಶಗಳ ಬಗ್ಗೆ

ಅಧ್ಯಕ್ಷರು.—ಮುಂದಿನ ಕಾರ್ಯಕ್ರಮ. ಗಮನ ಸೆಳೆಯುವ ಸೂಚನೆಗಳು. ಡಾ. ಹೆಚ್. ಎಲ್, ತಿಮ್ಮೇಗೌಡರು.

ಶ್ರೀ ಹೆಚ್. ಎಲ್ ತಿಮ್ಮೇಗೌಡ.—ಅಧ್ಯಕ್ಷರೇ, ಬೆಂಗಳೂರು ನಗರದ ಚೆನ್ನಮ್ಮನ ಕೆರೆ ಹಾಗೂ ಬನಶಂಕರಿ ಪ್ರದೇಶಗಳಲ್ಲಿ ಕೊಳಚೆ ಪ್ರದೇಶಗಳು ತಲೆದೋರಿರುವ ವಿಚಾರವನ್ನು ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ಸೆಳೆಯಲು ಬಯಸುತ್ತೇನೆ.

SRI DHARAM SINGH.—(Minister for Housing and Urban Development) :

Sir I wish to make the following Statement.

There was a slum with about 150 huts situated in Banashankari Second Stage opposite to B. D. A. Burial Ground adjacent to Storm Water Drain. About two years ago, the Bangalore Development Authorities have demolished all these huts. After demolition of the huts, these slum dwellers has occupied the present area called Channammana Kere'' and have been living there since that period The name of this slum is included in the identified list of slums prepared by the Bangalore Development Authority. At present there are about 180 huts. This slum is in existence prior to issue of the recent ordinance. It has not been notified as a slum area under the K. S. A. (I & C) Act, 1973.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಆರ್ಡಿನೆನ್ಸ್ ಹೊರಡಿಸಿದ ಮೇಲೆ ಎಲ್ಲೂ ಗುಡಿಸಲುಗಳು ಹಾಕಿಲ್ಲವೆಂದು ಅಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ. ಅದನ್ನೇ ಮಾನ್ಯ ಮಂತ್ರಿಗಳವರು ಇಲ್ಲಿ ಕೊಟ್ಟಿದ್ದಾರೆ. ಆದರೆ ನಾನೇ ಹೋಗಿ ನೋಡಿದ್ದೇನೆ. ಮೊದಲು ಕೆಲವು ಗುಡಿಸಲು ಇದ್ದವು, ಈಚೆಗೆ ಈ ಆರ್ಡಿನೆನ್ಸ್ ಬಂದ ಮೇಲೂ ಕೂಡ ಗುಡಿಸಲುಗಳನ್ನು ಹಾಕಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಈ ಆರ್ಡಿನೆನ್ಸ್ ಬರುವುದಕ್ಕಿಂತ ಹಿಂದೆ ಹಾಕಿರತಕ್ಕ ಗುಡಿಸಲುಗಳು. ಅನಂತರ ಹಾಕಿರತಕ್ಕ ಗುಡಿಸಲು ಎಲ್ಲವನ್ನೂ ಸಹ ಕಿತ್ತು ಹಾಕತಕ್ಕ ಆ್ಯಕ್ಷನ್ನು ನಾವು ಇಲ್ಲಿ ಪಾಸ್ ಮಾಡಿ

ದ್ದೇವೆ ಮತ್ತೆ ಮಾನ್ಯ ಮಂತ್ರಿಗಳವರು ಹೇಳಿಕೆ ಕೊಟ್ಟಿರುವ ಪ್ರಕಾರ ಆ ಏರಿಯಾವನ್ನು ನೋಟಿಫೈ ಮಾಡಿಲ್ಲ, ಆದುದರಿಂದ ಅಲ್ಲೂ ಸಹ ಗುಡಿಸಲುಗಳನ್ನು ಹಾಕುವುದಕ್ಕೆ ಅವಕಾಶ ಮಾಡಿಕೊಡಬಾರದು. ಮತ್ತೆ ಇದರ ಬಗ್ಗೆ ಇಲ್ಲಿಯವರೆಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ, ಅದನ್ನು ತೆಗೆದು ಕೊಂಡಿಲ್ಲ. ಇದಕ್ಕೆ ಒಂದು ಕಾರಣವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದು ಏನೆಂದರೆ, ಬೆಂಗಳೂರು ಸ್ಲಂ ಕ್ಲಿಯರೆನ್ಸ್ ಬೋರ್ಡಿಗೆ ಫುಲ್ ಟೈಮ್ ಛೇರ್ಮನ್ ಒಬ್ಬರು ಇಲ್ಲದೇ ಇರುವುದರಿಂದ ಒಂದು ದೊಡ್ಡ ಕೊರತೆಯಾಗಿದೆ. ಬೇಗಳೂರು ಸಿಟಿ ಕಾರ್ಪೋರೇಷನ್ನಿನ ಕಮಿಷನರ್‌ರವರೇ ಛೇರ್ಮನ್ ರಾಗಿದ್ದಾರೆ ಆವರ ಕೈ ಕೆಳಗೆ ೪-೫ ಜನ ಕೆಲಸ ಮಾಡುತ್ತಿದ್ದಾರೆ. ಕಮಿಷನರ್‌ರವರ ಅಲ್ಲಿಯ ಕೆಲಸದ ಜೊತೆಗೆ ಇಲ್ಲಿಯ ಕೆಲಸವನ್ನು ಮಾಡುವುದಕ್ಕೆ ಖಂಡಿತವಾಗಿಯೂ ಟೈಮ್ ಸಾಕಷ್ಟು ಸಿಗುತ್ತಿಲ್ಲ. ಆದುದ ರಿಂದ ನಾನು ಮಾನ್ಯ ಮಂತ್ರಿಗಳವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈಗಲಾದರೂ ತಾವು ಅಲ್ಲಿಗೆ ಫುಲ್ ಟೈಮ್ ಛೇರ್ಮನ್‌ರೊಬ್ಬರನ್ನು ಹಾಕದಿದ್ದರೆ ನಾವು ಈಗ ಏನು ಆರ್ಡಿನೆನ್ಸ್‌ನ್ನು ಪಾಸ್ ಮಾಡಿದ್ದೇವೆ ಅದು ಕಾರ್ಯಗತವಾಗುವುದಿಲ್ಲ. ಆದುದರಿಂದ ಆಲ್ಲಿಗೆ ಒಬ್ಬರು ನಿಮ್ಮ ಪಕ್ಷದವರನ್ನೇ ಬೇಕಾದರೆ ನಾನ್ ಆಫಿಷಿಯಲ್ಸ್‌ನ್ನು ಛೇರ್ಮನ್ ಆಗಿ ಹಾಕಿ. ಮಾನ್ಯ ಮಂತ್ರಿಗಳವರ ಪಕ್ಷದಲ್ಲಿರತಕ್ಕವ ರನ್ನೇ, ಕೈ, ಬಾಯಿ ಶುದ್ಧವಾಗಿರತಕ್ಕವರನ್ನೇ ಅಲ್ಲಿಗೆ ನೇಮಕ ಮಾಡುವುದು ಒಳ್ಳೆಯದು. ಆಕಸ್ಮಾತ್ ನಾನ್ ಆಫಿಷಿಯಲ್ಸ್ ಛೇರ್ಮನ್ ಆಗಿ ಸರಿಯಾಗಿ ಅಲ್ಲಿ ಕೆಲಸ ಮಾಡುವುದಿಲ್ಲ ಎನ್ನುವ ಹೆದರಿಕೆ ಇದ್ದರೆ, ನಿಮ್ಮ ಪಕ್ಷದಲ್ಲಿರತಕ್ಕ ನಾನ್ ಆಫಿಷಿಯಲ್ಸ್ ಮೇಲೆ ನಂಬಿಕೆ ಇಲ್ಲದಿದ್ದರೆ ಫುಲ್ ಟೈಮ್ ಛೇರ್ಮನ್ ಆಗಿ ಯಾರಾದರೂ ಒಬ್ಬ ಆಫಿಷಿಯಲ್ಸ್‌ನ್ನೇ ನೇಮಕ ಮಾಡಿ. ಏತಕ್ಕೆಂದರೆ ಇವತ್ತು ಬೆಂಗಳೂರು ನಗರದಲ್ಲಿ ೪೯೦ ಸ್ಲಂಗಳು ಇವೆ. ಒಂದು ಸಲ ಮಾನ್ಯ ಮಂತ್ರಿಗಳವರೇ ಹೇಳಿದ ಹಾಗೆ ದಿವಸಕ್ಕೆ ಕನಿಷ್ಠ ಪಕ್ಷ ವೆಂದರೆ ಬೆಂಗಳೂರಿಗೆ ೩೦, ೪೦೦ ಜನ ಬೇರೆ ರಾಜ್ಯಗಳಿಂದ ಬರುತ್ತಿದ್ದಾರೆ. ಪ್ರತಿ ದಿವಸ ಸ್ಲಂಗಳು ಹುಟ್ಟುತ್ತಿವೆ. ಸರ್ಕಾರದವರು ಸರಿಯಾದ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಇವತ್ತು ಇರತಕ್ಕ ೪೯೦ ಸ್ಲಂಗಳು ಇನ್ನು ಒಂದು ವರ್ಷದೊಳಗೆ ೬೦೦ ಆಗಬಹುದು. ಇದೇ ರೀತಿ ಮುಂದುವರಿದರೆ ಬೆಂಗಳೂರು ನಗರ ಸಹ ಬೊಂಬಾಯಿ, ಕಲ್ಕತ್ತ ನಗರಗಳ ಹಾಗೆ ಸ್ಲಂ ಸಿಟಿ ಆಗುತ್ತದೆ. ಮಾನ್ಯ ಮಂತ್ರಿ ಗಳು ದೊಡ್ಡ ಮನಸ್ಸು ಮಾಡಿ, ಈಗ ೨೯೦ ಸ್ಲಂಗಳು ಎಂದು ಏನು ಡಿಕ್ಲೇರ್ ಮಾಡಿದ್ದಾರೆ ಅದಕ್ಕಿಂತ ಹೆಚ್ಚಿಗೆ ಇರತಕ್ಕ ಸ್ಲಂಗಳನ್ನು ನಿರ್ಮೂಲನ ಮಾಡಬೇಕಾದರೆ ಸ್ಲಂ ಬೋರ್ಡಿನಲ್ಲಿ ಫುಲ್ ಟೈಂ ಛೇರ್ಮನ್ ಇರಬೇಕಾಗುತ್ತದೆ. ಅವರು ಆಫಿಶಿಯಲ್ ಛೇರ್ಮನ್ನರನ್ನಾದರೂ ಮಾಡಲೀ ಅಥವಾ ನಾನ್ ಆಫಿಷಿಯಲ್ ಛೇರ್ಮನ್ನರನ್ನಾದರೂ ಮಾಡಲಿ. ಆಫಿಷಿಯಲ್ ಛೇರ್ಮನ್ನರನ್ನು ಮಾಡಿದರೆ ಅವರಿಗೆ ಪೋಲೀಸ್ ಅಧಿಕಾರಿ ಗಳನ್ನು ಕೊಡಬೇಕಾಗುತ್ತದೆ ಮತ್ತು ಇನ್ನೂ ಹೆಚ್ಚಿ ಗೆ ಇತರೆ ಅಧಿಕಾರಿಗಳು ಬೇಕಾಗುತ್ತದೆ ಒಟ್ಟಿನಲ್ಲಿ ಸ್ಲಂ ಬೋರ್ಡಿಗೆ ಎಷ್ಟು ಅಧಿಕಾರಿಗಳು ಬೇಕಾಗುತ್ತಾರೆಂಬುದನ್ನು ನೋಡಿ ನೇಮಕ ಮಾಡಿ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ ಮತ್ತು ಈ ಸ್ಲಂಗಳನ್ನು ಆದಷ್ಟು ಜಾಗ್ರತೆ ನಿರ್ಮೂಲನ ಮಾಡಿ ಅಲ್ಲಿರತಕ್ಕವರನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.— ಇವತ್ತಿನ ದಿವಸ ಈ ಬಗ್ಗೆ ಒಂದು ಮಸೂದೆ ಕೂಡ ಪಾಸ್ ಆಗಿದೆ. ಅಂದರೆ ಹಳೆಯ ಸ್ಲಂ ಆಕ್ಟ್ ಏನಿತ್ತು ಅದಕ್ಕೆ ತಿದ್ದುಪಡಿಯಾಗಿ ಪಾಸ್ ಆಗಿದೆ ಆದರ ಬಗ್ಗೆ ಮಾತನಾಡ ತಕ್ಕ ಸಂದರ್ಭದಲ್ಲಿ ಕಾರಣಗಳನ್ನು ಉಲ್ಲೇಖ ಮಾಡಿದ್ದೇನೆ. ಚನ್ನಮ್ಮನ ಕೆರೆಯಲ್ಲಿ ೧೮೦ಕ್ಕಿಂತ ಹೆಚ್ಚು ಪರಿವಾರದ ಜನರು ಏನು ಇರುತ್ತಾರೆ ಅವರೆಲ್ಲ ಈ ಆರ್ಡಿನೆನ್ಸ್ ಬಂದಮೇಲೆ ಬಂದಿರತಕ್ಕವರು. ಆರ್ಡಿನೆನ್ಸ್ ಬಂದಮೇಲೂ ಸಾಕಷ್ಟು ಸ್ಲಂಗಳು ಬಂದಿವೆ. ಹಾಲಿ ೨೯೦ ಮಾತ್ರ ರೆಕಗ್‌ನೈಸ್ಡ್ ಸ್ಲಂಗಳು ಇವೆ. ಅದಕ್ಕಿಂತಲೂ ಹೆಚ್ಚಿಗೆ ಸ್ಲಂಗಳು ಬಂದಿವೆ ಎಂಬುದನ್ನು ಶಾಸಕರೂ ಹೇಳಿದ್ದಾರೆ ಮತ್ತು ನಮ್ಮ ಅಧಿಕಾರಿಗಳು ಸಹ ವರದಿ ಮಾಡಿದ್ದಾರೆ. ಹೀಗೆ ಹೆಚ್ಚಾಗಿ ಬಂದಿರತಕ್ಕ ಸ್ಲಂಗಳಿಗೆ ಅವಕಾಶ ಕೊಡಬಾರ ದೆಂಬ ಅಭಿಪ್ರಾಯ ಸರ್ಕಾರದಲ್ಲಿದೆ. ಸ್ಲಂ ಬೋರ್ಡಿಗೆ ಇವತ್ತಿನ ದಿವಸ ನಾನ್ ಆಫಿಷಿಯಲ್ ಛೇರ್ಮನ್ ಆನ್ನು ಹಾಕಿ ಅಥವಾ ಇರತಕ್ಕವರನ್ನು ಫುಲ್ ಟೈಂ ಛೇರ್ಮನ್‌ಆನ್ನಾಗಿಯಾದರೂ ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಕೂಡ ವಿಚಾರ ಮಾಡಿದ್ದೇವೆ. ಈಗ ಮಸೂದೆ ಪಾಸ್ ಆಗಿರುವುದರಿಂದ ನಮಗೆ ಸಾಕಷ್ಟು ಅಧಿಕಾರ ಸಿಕ್ಕಿದೆ. ಪೋಲೀಸ್ ಅಧಿಕಾರಿಗಳ ಸಹಾಯ ಎಲ್ಲೆಲ್ಲಿ ಬೇಕಾಗುತ್ತದೆ ಅಲ್ಲೆಲ್ಲ ಉಪಯೋಗಿಸಿಕೊಂಡು ಸ್ಲಂಗಳನ್ನು ತಡೆಗಟ್ಟಲಿಕ್ಕೆ ಸಿದ್ಧರಾಗಿದ್ದೇವೆ. ಅದಕ್ಕೆ ತಮ್ಮೆಲ್ಲರ ಸಹಕಾರ ಕೂಡ ಬೇಕಾಗಿದೆ. ಬೆಂಗಳೂರು ನಗರವನ್ನು ಉತ್ತಮ ನಗರವಾಗಿ ಉಳಿಸಿಕೊಂಡು

ಹೋಗುವ ಸಲುವಾಗಿ ಸ್ಪಂ ಏರಿಯಾಗಳು ಹೆಚ್ಚಾಗಿ ಬೆಳೆಯದಂತೆ ಏರ್ಪಾಡು ಮಾಡಿದ್ದೇವೆ. ಹಾಲಿ ಇರತಕ್ಕ ಗುಡಿಸಲುಗಳಿಗೆ ಸಿವಿಕ್ ಅಮೆನಿಟೀಸ್ ಕೊಟ್ಟಿದ್ದೇವೆ. ಆರ್ಡಿನೆನ್ಸನ್ನು ಹೊರಡಿಸಿದ ಮೇಲೂ ಸಾಕಷ್ಟು ಗುಡಿಸಲುಗಳು ಬಂದಿವೆ ಎಂದು ಅಧಿಕಾರಿಗಳು ವರದಿ ಕೊಟ್ಟಿದ್ದಾರೆ ಮತ್ತು ಈಗಲೂ ಬರುತ್ತಿವೆ ಎಂದು ತಿಳಿದುಬಂದಿದೆ. ಹೀಗೆ ಅನ್ ಆಥರೈಸ್ ಆಗಿ ಎಲ್ಲೆಲ್ಲಿ ಗುಡಿಸಲುಗಳನ್ನು ಹಾಕಿದ್ದಾರೆ, ಗುಡಿಸಲುಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಮತ್ತು ಯಾರು ಇದಕ್ಕೆ ಪ್ರಚೋದನೆ ಮಾಡುತ್ತಿದ್ದಾರೆ ಅಂಥವರು ಯಾರೇ ಇರಲಿ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ. ಮತ್ತು ಇದನ್ನು ಕೂಡ ಸರಿಪಡಿಸುತ್ತೇವೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

SRI A. LAKSHMI SAGAR.— Sir, the Hon,ble Minister said that he would exercise powers under the newly amended Act. It is very good. But I should like to know from him when exactly he is going to take steps (within one month or two months. for the demolition of all unauthorised slums. Sooner it is done better it would be for the citizens of Bangalore. Yesterday,s census figures indicate that we are in a dangerous situation. Mr. Dharam Singh must be the first citizen of Bangalore. Even a blind man can see the phenomenal growth of Bangalore City and the original inhabitants of Bangalore city will be in helpless condition. Let the Hon,ble Minister start his operation against these unauthorised occupation of Government lands, private lands, BDA, Corporation and other lands and throw them up. Let them go wherever they like, but not in Bangalore city. This is my submission.

ಶ್ರೀ ಧರ್ಮಸಿಂಗ್.— ಈಗ ಮಾನ್ಯ ಲಕ್ಷ್ಮೀಸಾಗರ್‌ರವರು ಏನು ಹೇಳುತ್ತಿದ್ದಾರೆ ಅದೇರೀತಿ ಮಾಡುತ್ತಿದ್ದೇವೆ. ಡಿಮಾಲಿಷನ್ ಕೆಲಸ ಪ್ರಾರಂಭವಾಗಿ ಈಗಾಗಲೇ ೩೧ ಗುಡಿಸಲುಗಳನ್ನು ಕಿತ್ತಿದ್ದೇವೆ ಅದನ್ನು ಮಾಡುವಾಗ ಕೂಡ ವ್ಯವಹಾರಿಕವಾಗಿ ಸ್ವಲ್ಪ ಅನಾನುಕೂಲತೆಯಾಗುತ್ತಿದೆ. ೨೭ರಂದು ಬೋರ್ಡ್ ಮೀಟಿಂಗ್ ಇಟ್ಟಿದ್ದೇವೆ. ಮತ್ತು ಇವ್ಯೂಡಿಯಟ್ ಪ್ರೆಷರ್‌ನಿಂದ ಕೆಲಸ ಮಾಡುತ್ತೇವೆ.

MR. SPEAKER.— We will go to next calling attention.

(*ii*) *re* :- *Inadequate supply of Food Grains to Tumkur and Kolar Districts.*

SRI T. B. JAYACHANDRA (Kallambella)— Sir, I call the attention of the Minister for Food and Civil Supplies to the inadequate supply of food grains to Tumkur and Kolar Districts.

SRI MANIK RAO PATIL (Minister for Food and Civil Supplies).— Sir, I wish to make the following statement.—

The substance of Calling Attention No. 93 and No. 119 by Sri T. B. Jayachandra, M. L. A., are about the strike declared by the Secretaries of the Cooperative Societies in the Tumkur District on 16-2-1981 and regarding the alleged failure to lift food grains by the T. A. P. M. Cs in the districts and measures taken to ensure proper distribution of essential commodities.